**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** M/s Dowac Systems & Projects India Pvt Ltd., ಬೆಂಗಳೂರು ಇವರು ರಾಯಚೂರು ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ 'ಅಮೃತ ಧಾರ' ಯೋಜನೆಯಡಿ RO ತಂತ್ರಜ್ಞಾನದ ಡೀ-ಫ್ಲೋರಿಡೇಷನ್ ಘಟಕಗಳನ್ನು ಪಿಪಿಪಿ ಮಾಡೆಲ್ ಅಡಿಯಲ್ಲಿ ಪ್ರಾಯೋಗಿಕವಾಗಿ ಅಳವಡಿಸುವ ಕುರಿತು.

**ಓದಲಾಗಿದೆ:** ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ರಾಯಚೂರು ರವರ ಪತ್ರ ಸಂ:ಜಿಪರಾ/ಕುನೀಸ/Dowac/2012-13/12309 ದಿ:24.01.2013.

-

**ಪೀಠಿಕೆ:**

M/s Dowac Systems & Projects India Pvt Ltd., ಬೆಂಗಳೂರು ಇವರು ರಾಯಚೂರು ಜಿಲ್ಲೆಯ ಗ್ರಾಮೀಣ ಪಂಚಾಯತಿಗಳಲ್ಲಿ 'ಅಮೃತ ಧಾರ' ಯೋಜನೆಯಡಿ RO ತಂತ್ರಜ್ಞಾನ ಆಧಾರಿತ ಡೀ-ಫ್ಲೋರಿಡೇಷನ್ ಘಟಕಗಳನ್ನು 100% ಸ್ವಂತ ಬಂಡವಾಳದಲ್ಲಿ ಅಳವಡಿಸಿ ನಿರ್ವಹಣೆ ಮಾಡಿ, ಪ್ರತಿ 20 ಲೀಟರ್‌ಗೆ ರೂ.3/- ರಂತೆ ನೀರಿನ ಕರ ಸಂಗ್ರಹಿಸಿ ಶುದ್ಧ ಕುಡಿಯುವ ನೀರನ್ನು ಪೂರೈಸಲು ಮುಂದೆ ಬಂದಿರುವುದಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ರಾಯಚೂರುರವರು ಉದ್ದೇಶಿತ ಸಂಸ್ಥೆಯ ಪ್ರಸ್ತಾವನೆಗೆ ಅನುಮೋದನೆ ನೀಡುವಂತೆ ಶಿಫಾರಸ್ ಮಾಡಿರುತ್ತಾರೆ. ರಾಯಚೂರು ಜಿಲ್ಲೆಯಲ್ಲಿ ಅಧಿಕ ಫ್ಲೋರೈಡ್ ಅಂಶವಿರುವ ಒಂದು ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತ್‌ಗಳ ಕೇಂದ್ರಸ್ಥಾನಗಳಲ್ಲಿ ಶುದ್ಧೀಕರಣ ಘಟಕಗಳನ್ನು ಪ್ರಾಯೋಗಿಕವಾಗಿ ಸ್ಥಾಪಿಸುವ ಪ್ರಸ್ತಾಪಕ್ಕೆ ಅನುಮೋದನೆ ನೀಡಲು ನಿರ್ಣಯಿಸಿದೆ. ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 38 ಗ್ರಾನೀಸ(5) 2013 ಬೆಂಗಳೂರು, ದಿನಾಂಕ: 18.02.2013**

ಪೀಠಿಕೆಯಲ್ಲಿನ ವಾಸ್ತವಾಂಶಗಳ ಹಿನ್ನೆಲೆಯಲ್ಲಿ, M/s Dowac Systems & Projects India Pvt Ltd., ಬೆಂಗಳೂರುರವರು **"ಅಮೃತ ಧಾರ"** ಯೋಜನೆಯಡಿ 100% ಸದರಿ ಸಂಸ್ಥೆಯ ಸ್ವಂತ ಬಂಡವಾಳದಲ್ಲಿ RO ತಂತ್ರಜ್ಞಾನದ ಡೀ-ಫ್ಲೋರಿಡೇಷನ್ ಘಟಕಗಳನ್ನು ರಾಯಚೂರು ಜಿಲ್ಲೆಯಲ್ಲಿ ಅಧಿಕ ಫ್ಲೋರೈಡ್ ಅಂಶವಿರುವ ಒಂದು ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತ್‌ಗಳ ಕೇಂದ್ರಸ್ಥಾನಗಳಲ್ಲಿ ಪಿಪಿಪಿ ಮಾಡೆಲ್ ಅಡಿಯಲ್ಲಿ ಪ್ರಾಯೋಗಿಕವಾಗಿ ಅಳವಡಿಸುವ ಪ್ರಸ್ತಾಪಕ್ಕೆ ಈ ಕೆಳಕಂಡ ನಿಬಂಧನೆಗಳನ್ವಯ ಅನುಮೋದನೆ ನೀಡಲು ಸರ್ಕಾರವು ಹರ್ಷಿಸುತ್ತದೆ.

- ಸಾರ್ವಜನಿಕ ಕುಡಿಯುವ ನೀರಿನ ಜಲಮೂಲದ ಸಂಪರ್ಕವನ್ನು ಮಾತ್ರ ಪ್ರಶ್ನಿತ ಸಂಸ್ಥೆಗೆ ಉಚಿತವಾಗಿ ನೀಡುವುದು.
- ಇದಕ್ಕೆ ಬೇಕಾದ ವಿದ್ಯುತ್ ಅಥವಾ ಸೋಲಾರ್ ಸಂಪರ್ಕ ವ್ಯವಸ್ಥೆ ಸಲಕರಣೆಗಳು ಹಾಗೂ ಇತರೆ ಘಟಕ ಸ್ಥಾಪನೆ, ಸ್ಥಾವರ, RO ತಂತ್ರಜ್ಞಾನದ ಆಧಾರದ Plant ಎಲ್ಲವನ್ನು ಸದರಿ ಸಂಸ್ಥೆ ಅವರ ಬಂಡವಾಳದಲ್ಲಿ ಅಳವಡಿಸಿಕೊಂಡು 5 ವರ್ಷಗಳ ಕಾಲ ನಿರ್ವಹಣೆ ಮಾಡಬೇಕು.
- ಈ ಅವಧಿಯಲ್ಲಿ ಸ್ಥಳೀಯ ಯುವಕ - ಯುವತಿಯರಿಗೆ ತರಬೇತಿ ನೀಡಿ ಆರೋಗ್ಯಕರ ವಾತಾವರಣ ಹಾಗೂ ನೀರಿನ ಸಂಪನ್ಮೂಲಗಳ ಬಳಕೆ ಕುರಿತಂತೆ ಅರಿವು ಮೂಡಿಸಬೇಕು. ನೀರು ಶುದ್ಧೀಕರಣದಿಂದ ಹೊರ ಹೊಮ್ಮುವ ತ್ಯಾಜ್ಯ ವಸ್ತು (sludge material) ಅಂತರ್ಜಲಕ್ಕೆ ಬಹಳ ಹಾನಿಕಾರಕವಾಗುವುದರಿಂದ, ಅದನ್ನು ಸುರಕ್ಷಿತವಾಗಿ ಬೇರೆಡೆಗೆ ಸಾಗಿಸಬೇಕು.

- ಸಾರ್ವಜನಿಕ ಜಲಮೂಲಗಳಿಂದ ಶುದ್ಧೀಕರಣಕ್ಕೆ ತೆಗೆದುಕೊಳ್ಳುವ ನೀರಿನ ಪ್ರಮಾಣ ಹಾಗೂ ಸರಬರಾಜು ಪ್ರಮಾಣದ ಲೆಕ್ಕ ನಿರ್ವಹಣೆಗಾಗಿ log book ನಿರ್ವಹಣೆ ಮಾಡಬೇಕು. ಇದನ್ನು ತಾಲ್ಲೂಕಿನ ಅಧಿಕಾರಿಗಳು ಉಸ್ತುವಾರಿ / ತಪಾಸಣೆ ಮಾಡಬೇಕು.
- ಯಾವುದೇ ಕಾರಣಕ್ಕೂ ಶುದ್ಧೀಕರಿಸಿದ ನೀರನ್ನು ಮರೆಮಾಚಿ ಬೇರೆಡೆಗೆ ಸಾಗಿಸಿ, ವಾಣಿಜ್ಯೋದ್ಯಮಕ್ಕೆ ಪೂರಕವಾಗಿ ನಡೆದುಕೊಳ್ಳದಂತೆ ಕಠಿಣ ನಿರ್ಬಂಧ ವಿಧಿಸಿ, ಸದರಿ ವಿಧಿವಿಧಾನಗಳು ಪಾಲನೆಯಾಗುವಂತೆ ಹಾಗೂ ಈ ದಿಸೆಯಲ್ಲಿ ಅಗತ್ಯವಿರುವ ನಿಬಂಧನೆಗಳನ್ನು ಅಳವಡಿಸಲು ಕ್ರಮವಹಿಸತಕ್ಕದ್ದು.
- ನೀರಿನ ಗುಣಮಟ್ಟ ಕುಡಿಯಲು ಯೋಗ್ಯವಾಗಿರುವುದನ್ನು ಸರ್ಕಾರದ ಪ್ರಯೋಗಾಲಯದಲ್ಲಿ ಪರೀಕ್ಷೆಗೊಳಪಡಿಸಿ ಕುಡಿಯಲು ಸುರಕ್ಷಿತವಾಗಿರುವುದನ್ನು ಖಾತ್ರಿಪಡಿಕೊಳ್ಳಬೇಕು.

3. ಈ ಆದೇಶವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ IFA ರವರು ಯೋಜನೆಗಳ ಮುಂದುವರಿಕೆಗೆ ಹೊರಡಿಸಿರುವ ಆದೇಶ ಸಂಖ್ಯೆ:ಗ್ರಾಅಪ 13 ಆಂಅಸ 2012 ದಿ:02.04.2012ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ (ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಪ್ರತಿಗಳು:

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು-1) ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಎಯು-2) ಕರ್ನಾಟಕ, ಬೆಂಗಳೂರು.
4. ಉಪ ಮಹಾಲೇಖಪಾಲರು, ಮಹಾಲೇಖಪಾಲರು(ಎಯು-1)ರವರ ಶಾಖಾ ಕಛೇರಿ, ಕಾಲೇಜು ರಸ್ತೆ, ಧಾರವಾಡ.
5. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು-1.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ ಬೆಂ.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂ.
9. ವಿಶೇಷಾಧಿಕಾರಿಗಳು(ಜಿಪಂ)ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿಗಳು,ಆರ್ಥಿಕ ಇಲಾಖೆ, ವಿಧಾನಸೌಧ ಬೆಂ.
10. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ (6) (ಜಿಪಂ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
11. ಮುಖ್ಯ ಇಂಜಿನಿಯರ್, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆ, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಸಂಕೀರ್ಣ,ನಂ55, 4ನೇ ಮಹಡಿ, ಅಭಯ ಕಾಂಪ್ಲೆಕ್ಸ್, ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು.-20.
12. ಅಧ್ಯಕ್ಷರು, ಜಿಲ್ಲಾ ಪಂಚಾಯತ್, **ರಾಯಚೂರು.**
13. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, **ರಾಯಚೂರು.**
14. ಅಧೀಕ್ಷಕ ಅಭಿಯಂತರರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ ಕಛೇರಿ, **ಬಳ್ಳಾರಿ.**
15. ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, **ರಾಯಚೂರು.**
16. ಮುಖ್ಯ ಲೆಕ್ಕಾಧಿಕಾರಿಗಳು, ಮುಖ್ಯ ಇಂಜಿನಿಯರ್‌ರ ಕಛೇರಿ, PRED, ಬೆಂಗಳೂರು-20.
17. ನಿರ್ದೇಶಕರು, ಶ್ರೀ ಅಬ್ದುಲ್ ನಜೀರ್ ಸಾಬ್‌ರವರ ಗ್ರಾಮೀಣಾಭಿವೃದ್ಧಿ ರಾಜ್ಯ ಸಂಸ್ಥೆ, ಲಲಿತ್ ಮಹಲ್ ರಸ್ತೆ, ಮೈಸೂರು.
18. M/s Dowac Systems & Projects India Pvt Ltd., #15/9, Primrose Road, M.G.Road Cross, Bangalore-01
19. ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿ (ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿಗಳು.
20. ನಿರ್ದೇಶಕರು KRWSSA ಮತ್ತು ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು/ ಅಪರ ನಿರ್ದೇಶಕರು, (ಆರ್ಥಿಕ) KRWSSA/SWSM/ ಆಂತರಿಕ ಆರ್ಥಿಕ ಸಲಹೆಗಾರರು, RDPR ಇಲಾಖೆ, ಇವರುಗಳ ಆಪ್ತ ಸಹಾಯಕರು.
21. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು.
22. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾಅಪಂರಾ ಇಲಾಖೆ(ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5ಪ್ರತಿಗಳು)
23. ರಾಜ್ಯ ಪತ್ರಾಗಾರ ಇಲಾಖೆ(ಬಿಡಿ ಪ್ರತಿ ಶಾಖೆ)
24. ಗ್ರಾ.ಅ.ಪಂ.ರಾಜ್ ಇಲಾಖೆ ಮಾಹಿತಿ ಕೇಂದ್ರ-10ಪ್ರತಿಗಳು. 25. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.